ರೂಪಾಯಿ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಚಾಮರಾಜ ತಾಲ್ಲೂಕು ಬರ ಎಂದು ಘೋಷಣೆ ಆಗಬೇಕು ಮತ್ತು ಕುಡಿಯುವ ನೀರಿಗೆ ಹಣ ಬಿಡುಗಡೆಯಾಗಬೇಕು.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬರಗಾಲ ಎನ್ನುವ ಹಿನ್ನೆಲೆಯೊಳಗೆ ಅನುದಾನ ಕೊಡಬೇಕೆಂದು ಅವರು ಕೇಳಿದ್ದಾರೆ. ಆದರೆ, ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗಾಗಿ ಏನು ಅನುದಾನವನ್ನು ಅವರು ಕೇಳುತ್ತಿದ್ದಾರೆ, ಅದನ್ನು ಪ್ರತ್ಯೇಕವಾಗಿ NRDWP ಅಡಿ ಅವರಿಗೆ ಒದಗಿಸಿ ಕೊಡುತ್ತೇವೆ.

20. ವಿಷಯ: 2015–16ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಡಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಅನುದಾನ ಬಿಡುಗಡೆಯಾಗದಿರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿರುವ ಕುರಿತು.

* * *

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಉಪಾಧ್ಯಕ್ಷರೆ, 14ನೇ ಹಣಕಾಸು ಯೋಜನೆಯ ಹಣ ಸುಮಾರು 1,000 ಕೋಟಿಗಳಷ್ಟು ಬರಬೇಕಾಗಿತ್ತು. ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಇವತ್ತಿನವರೆಗೆ ಒಂದು ರೂಪಾಯಿ ಸಹ ಬಂದಿಲ್ಲ. ಈಗಾಗಲೇ 5 ತಿಂಗಳುಗಳಾಗಿದೆ. ಜಿಲ್ಲಾ ಪಂಚಾಯಿತಿಯಲ್ಲಿ ರಸ್ತೆಗಳಿಗೆ ಹಣ ಬರುತ್ತದೆಂದು ಒಂದೊಂದು Constituency ಯವರು ಕಾಯುತ್ತಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರದಿಂದ ಕೊಡದೇ ಇದ್ದರೆ ರಾಜ್ಯ ಸರ್ಕಾರದಿಂದಲಾದರೂ ಹಣ ಕೊಟ್ಟಿರಿ, ಬಂದ ಮೇಲೆ ಕೇಂದ್ರ ಸರ್ಕಾರದಿಂದ ತಗೊಳ್ಳಿ ಎಂದು ನಾನು ಗ್ರಾಮೀಣಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಐದು

ವರ್ಷಗಳ ಅವಧಿಗೆ (2015–16 ರಿಂದ 2019–20ರವರೆಗೆ) ರಾಜ್ಯಕ್ಕೆ ಲಭ್ಯವಾಗುವ ಸಾಮಾನ್ಯ ಮೂಲ ಅನುದಾನ ಹಾಗೂ ಸಾಮಾನ್ಯ ಕಾರ್ಯಕ್ಷಮತೆ ಅನುದಾನ ಅನುಕ್ರಮವಾಗಿ ರೂ. 8359.79 ಕೋಟಿಗಳು ಹಾಗೂ ರೂ. 928.87 ಕೋಟಿಗಳು ಒಟ್ಟಾರೆ ರೂ. 9288.66 ಕೋಟಿಗಳನ್ನು ಭಾರತ ಸರ್ಕಾರವು ನಿಗಧಿಪಡಿಸಿರುತ್ತದೆ.

ಈ ಪೈಕಿ 2015–16ನೇ ಸಾಲಿನಲ್ಲಿ ರಾಜ್ಯಕ್ಕೆ ರೂ. 1002.85 ಕೋಟಿಗಳ ಅನುದಾನವನ್ನು ನಿಗಧಿಪಡಿಸಿದ್ದು, ಈ ಅನುದಾನವನ್ನು ಭಾರತ ಸರ್ಕಾರವು ಇದುವರೆವಿಗೂ ಬಿಡುಗಡೆಗೊಳಿಸಿರುವುದಿಲ್ಲ. 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಸದರಿ ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಮಾತ್ರ ಸಂಪೂರ್ಣವಾಗಿ ಬಿಡುಗಡೆಗೊಳಿಸಬೇಕಾಗಿರುವುದರಿಂದ ಸದರಿ ಅನುದಾನವು ಜಿಲ್ಲಾ ಪಂಚಾಯತಿಗಳಿಗೆ/ತಾಲ್ಲೂಕು ಪಂಚಾಯತಿಗಳಿಗೆ ಲಭ್ಯವಿರುವುದಿಲ್ಲ. ಈ ಅನುದಾನವನ್ನು ಶೇ. 90ರಷ್ಟು ಜನಸಂಖ್ಯೆ ಹಾಗೂ ಶೇ.10ರಷ್ಟು ಭೌಗೋಳಿಕ ಪ್ರದೇಶವನ್ನಾಧರಿಸಿ, ಹಂಚಿಕೆ ಮಾಡಬೇಕೆಂಬ ಷರತ್ತಿಗೆ ಒಳಪಟ್ಟಿರುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಒಟ್ಟು 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯಕ್ಕೆ ಲಭ್ಯವಾಗುವಂಥ ಸಾಮಾನ್ಯ ಮೂಲ ಅನುದಾನ ಹಾಗೂ ಸಾಮಾನ್ಯ ಕಾರ್ಯಕ್ಷಮತೆ ಅನುದಾನ ಅನುಕ್ರಮವಾಗಿ ರೂ. 8359.79 ಕೋಟಿಗಳು ಹಾಗೂ ರೂ. 928.87 ಕೋಟಿಗಳು ಒಟ್ಟಾರೆ ರೂ. 9288.66 ಕೋಟಿಗಳನ್ನು ಭಾರತ ಸರ್ಕಾರವು ನಿಗಿದಿಪಡಿಸಿದೆ. ಈ ಪೈಕಿ 2015–16ನೇ ಸಾಲಿಗೆ 1002 ಕೋಟಿ ರೂಪಾಯಿಗಳ ಅನುದಾನವನ್ನು ನಿಗದಿಪಡಿಸಿದ್ದು, ಈ ಅನುದಾನ ಇದುವರೆವಿಗೂ ಬಿಡುಗಡೆಯಾಗಿಲ್ಲ. ಆ ಕಾರಣದಿಂದ 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವುದಕ್ಕೆ ಆಗಿಲ್ಲ. ಆದಷ್ಟು ಬೇಗ ಇದನ್ನು ಬಿಡುಗಡೆ ಮಾಡಬೇಕೆಂದು ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ತರುತ್ತಿದ್ದೇವೆ. ಕೇಂದ್ರ ಸರ್ಕಾರಕ್ಕೆ ಈ ವೇದಿಕೆ ಮುಖಾಂತರ ಆಗ್ರಹ

ಮಾಡುತ್ತೇನೆ. 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಅನುದಾನವನ್ನು ಬಿಡುಗಡೆ ಮಾಡಬೇಕು, ಇಲ್ಲದೇ ಹೋದರೆ ಬಹಳಷ್ಟು ಅನಾನುಕೂಲ ಗ್ರಾಮಾಂತರ ಭಾಗಕ್ಕೆ ಆಗುತ್ತದೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣ ಪ್ರದೇಶದ ರಸ್ತೆಗಳಿಗೆ ಹಣವಿದ್ದರೆ ಇವರು ಕೊಡಲಿ. ಇಲ್ಲದೇ ಹೋದರೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳನ್ನು ರದ್ದು ಮಾಡಿಬಿಡುವುದು ಒಳ್ಳೆಯದು. ದಯಮಾಡಿ ಮಂತ್ರಿಗಳು ರಾಜ್ಯ ಸರ್ಕಾರದಿಂದಲಾದರೂ ಕೊಡಲಿ. ನೀವು ನಿಯೋಗ ಹೋಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕಾಗುತ್ತದೆ. ನಮ್ಮ ರಾಜ್ಯ ಸರ್ಕಾರದಲ್ಲಿ ಕಾಂಗ್ರೆಸ್ ಸರ್ಕಾರವಿದೆ ಎಂದು ಹಣ ಬಿಡುಗಡೆ ಮಾಡಬಾರದೆಂದು ಇದ್ದಾರೆಯೇ? ಏನು ಕಾರಣ ಗೊತ್ತಿಲ್ಲ. ನಿಗದಿಪಡಿಸಿ 4 ತಿಂಗಳುಗಳಾದರೂ ಸಹ ಇವತ್ತಿನವರೆಗೂ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿಲ್ಲವೆಂದರೆ ಇದರ ಉದ್ದೇಶವೇನಿದು?

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ರೇವಣ್ಣನವರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ನಾವು ಮತ್ತು ಅವರು ಜೊತೆಯಾಗಿ ಕಾಗೇರಿಯವರಿಗೆ, ಬಣಕಾರ್‌ರವರಿಗೆ ಇಬ್ಬರಿಗೂ ಅವರ ಸರ್ಕಾರಕ್ಕೆ ಏನು ಒತ್ತಡ ತರಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ: ಅಲ್ಲಿಯವರೆಗೆ ನೀವಾದರೂ ಕೊಟ್ಟಿರಿ.

ಶ್ರೀ ಹೆಚ್.ಕೆ. ಪಾಟೀಲ್: ಇಲ್ಲ.

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 33 ನಿಮಿಷದಿಂದ ಮುಂದೂಡಿ ನಾಳೆ ಎಂದರೆ ದಿ:23.07.2015ರಂದು ಬೆಳಗ್ಗೆ 10 ಗಂಟೆಗೆ ಸಮಾವೇಶಗೊಳ್ಳುವಂತೆ ನಿಶ್ಚಯಿಸಿತು)